ದಿನಾಂಕಃ **19.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : **2** ಮತ್ತು **3** ನೇ ಎದುರುದಾರರ ಪರ ವಕೀಲರಿಂದಃ

01. ನಾನು 2 ನೇ ಪಿಯುಸಿ ವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ಹೂವಿನಹಡಗಲಿಯಲ್ಲೇ ಕಾಲೇಜಿಗೆ ಹೋಗಿದ್ದೆ. ನಾನು ಸುಮಾರು 1985 ನೇ ಇಸವಿಯಲ್ಲಿ ಪ್ರಥಮ ಪಿಯುಸಿ ಓದಿರಬಹುದು. ನಾನು ಮೂಲತಃ ನಂದಿಹಳ್ಳಿ ಗ್ರಾಮದವಳು ಎಂದರೆ ಸರಿ. ಮೃತ ಅಂದಾನಪ್ಪ ಬಶೆಟ್ಟಿ ನನಗೆ ಹೇಗೆ ಪರಿಚಯವಾಗಿದ್ದರು? ಎಂದರೆ ನಾನು ಪಿಯುಸಿ ಓದುವಾಗ ಪರಿಚಯವಾಗಿದ್ದರು. ಅವರು ಮೂಲತಃ ಹೂವಿನಹಡಗಲಿಯವರು. ಅಂದಾನಪ್ಪ ಬಶೆಟ್ಟಿಯವರ ತಾಯಿ ಅನಸೂಯಮ್ಮನ ಮೂಲ ಊರು ಯಾವುದು? ಎಂದರೆ ಉಪನಾಯಕನಹಳ್ಳಿ ಎಂದು ಹೇಳುತ್ತಾರೆ, ನನ್ನನ್ನು ಅವರ ಮನೆಗೆ ಸೇರಿಸಿಕೊಳ್ಳಲಿಲ್ಲವಾದ್ದರಿಂದ ನನಗೆ ಸರಿಯಾಗಿ ಗೊತ್ತಿಲ್ಲ. ಅನಸೂಯಮ್ಮನಿಗೆ ಅಂದಾನಪ್ಪ ಬಶೆಟ್ಟಿ 2 ನೇ ಮಗನಿರುತ್ತಾನೆ ಎಂದು ಹೇಳಿ ಸಾಕ್ಷಿಯವರು ಮತ್ತೆ 3 ನೇ ಮಗನಿರುತ್ತಾನೆ ಎಂದು ಹೇಳಿದ್ದಾರೆ. ಅನಸೂಯಮ್ಮನಿಗೆ 5 ಜನ ಗಂಡುಮಕ್ಕಳು ಮತ್ತು 4 ಜನ ಹೆಣ್ಣುಮಕ್ಕಳು ಇದ್ದರು. ಅಂದಾನಪ್ಪ ಬಶೆಟ್ಟಿ ಯಾವಾಗ ಹುಟ್ಟಿದ್ದ ಮತ್ತು ಆತನ ವಿದ್ಯಾರ್ಹತೆ ಏನು? ಎಂದರೆ 1962 ರಲ್ಲಿ ಹುಟ್ಟಿರಬಹುದು ಮತ್ತು ಅವರು ಎಸ್.ಎಸ್.ಎಲ್.ಸಿ. ಮಾಡಿದ್ದರು. ಎಲ್ಲಿ ಮತ್ತು ಯಾವ ಶಾಲೆಯಲ್ಲಿ ಓದಿದ್ದರು? ಎಂದರೆ ನನಗೆ ಗೊತ್ತಿಲ್ಲ. ನಾನು ಕಿರಿಯ ವಿಭಾಗ ನ್ಯಾಯಾಲಯದಲ್ಲಿ ಮತ್ತು ಈ ನ್ಯಾಯಾಲಯದಲ್ಲಿ ಈ ಅರ್ಜಿಗಳನ್ನು ಸಲ್ಲಿಸುವ ಮುಂಚೆ ಅಂದಾನಪ್ಪ ಬಶೆಟ್ಟಿಯ ವಿದ್ಯಾರ್ಹತೆ ಬಗ್ಗೆ ಮತ್ತು ಆತ ಎಲ್ಲಿ ವಿದ್ಯಾಭ್ಯಾಸ ಮಾಡಿದ್ದ ಎಂಬ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಮಾಡಲಿಲ್ಲವೇ? ಎಂದರೆ ಇಲ್ಲ. ಅಂದಾನಪ್ಪ ಬಶೆಟ್ಟಿಗೆ ನೌಕರಿ ಹೇಗೆ ಬಂತು? ಎಂದರೆ ನನಗೆ ಗೊತ್ತಿಲ್ಲ, ನೌಕರಿ ಮಾಡುತ್ತಿದ್ದ ಬಗ್ಗೆ ಮಾತ್ರ ಗೊತ್ತು ನೌಕರಿಯ ನೇಮಕಾತಿ ಯಾವಾಗ ಆಗಿತ್ತು ಮತ್ತು ಯಾವ ಇಸವಿಯಲ್ಲಿ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಮೃತನಾಗುವ ಕಾಲಕ್ಕೆ ಅಂದಾನಪ್ಪ ಬಶೆಟ್ಟಿ ಬಳ್ಳಾರಿಯ ಅರಣ್ಯ ಇಲಾಖೆಯಲ್ಲಿ ಎಸ್.ಡಿ.ಎ. ಆಗಿ ಕೆಲಸ ಮಾಡುತ್ತಿದ್ದರು.

02. ನಾನು ನಿಪಿ1 ದೃಢೀಕರಣ ಪತ್ರವನ್ನು ಇಟಗಿಯಲ್ಲಿ ಪಡೆದುಕೊಂಡಿದ್ದೆ . ನಿಪಿ1 ನ್ನು ಪಡೆಯುವಾಗ ನಾನು ಯಾವ ಯಾವ ದಾಖಲೆಗಳನ್ನು ಹಾಜರು ಮಾಡಿದ್ದೆ? ಎಂದರೆ ವಂಶವೃಕ್ಷ, ಆಧಾರ್ ಕಾರ್ಡ್, ಮರಣ ಪ್ರಮಾಣ ಪತ್ರ ಮತ್ತು ಚುನಾವಣಾ ಗುರುತಿನ ಚೀಟಿಯನ್ನು ಹಾಜರು ಮಾಡಿದ್ದೆ. ಅಂದಾನಪ್ಪ ಬಶೆಟ್ಟಿ ಹೂವಿನಹಡಗಲಿ ಪಟ್ಟಣದಲ್ಲಿ ಮೃತಪಟ್ಟಿದ್ದರು ಎಂದರೆ ಸರಿ. ನಾನು ನಿಪಿ1 ನ್ನು ಪಡೆದ ನಂತರ ಎದುರುದಾರರು ಹಡಗಲಿ ತಹಶೀಲ್ದಾರರಿಗೆ ನಿ.ಎ **1** ರಂತೆ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ತಹಶೀಲ್ದಾರರು ಸದರಿ ತಕರಾರನ್ನು ಸ್ವೀಕರಿಸಿ ಕಂದಾಯ ಅಧಿಕಾರಿಗಳಿಗೆ ನಾನು ಪಡೆದ ದೃಢೀಕರಣದ ಕುರಿತು ವಿಚಾರಣೆ ಮಾಡುವಂತೆ ಆದೇಶ ಮಾಡಿದ್ದರು ಎಂದರೆ ಸರಿ. ಆ ಪ್ರಕಾರ ಗ್ರಾಮ ಲೆಕ್ಕಿಗರು ನಮ್ಮ ಊರಿಗೆ ಬಂದು ನನ್ನನ್ನು ಸದರಿ ವಂಶವೃಕ್ಷದ ಬಗ್ಗೆ ವಿಚಾರಣೆ ಮಾಡಿದ್ದರು ಎಂದರೆ ಸರಿ. ವಿಚಾರಣೆ ಮಾಡಿ ಸಲ್ಲಿಸಿದ ವರದಿಯಲ್ಲಿ ಮೃತ ಅಂದಾನಪ್ಪ ಬಶೆಟ್ಟಿಯು ವಾರ್ಡ್ ನಂ. 17, ಮಾದಲಗಟ್ಟೆ ಸರ್ಕಲ್, ಹೂವಿನಹಡಗಲಿ ವಿಳಾಸದಲ್ಲಿ ವಾಸ ಮಾಡುತ್ತಿದ್ದರು ಎಂದು ವರದಿಯಲ್ಲಿ ನಮೂದು ಮಾಡಿದ್ದಾರೆ ಎಂದರೆ ಸರಿ. ನಮ್ಮ ಊರಿನಲ್ಲಿ ಮಾಹಿತಿ ಪಡೆದುಕೊಂಡು ನಾನು ಮತ್ತು ಅಂದಾನಪ್ಪ ಬಶೆಟ್ಟಿ ಯಾವತ್ತೂ ಒಂದೇ ಮನೆಯಲ್ಲಿ ವಾಸ ಮಾಡಿರಲಿಲ್ಲ ಎಂದು ವರದಿಯಲ್ಲಿ ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ಗ್ರಾಮ ಲೆಕ್ಕಿಗರು ನಮ್ಮ ಊರು ನಂದಿಹಳ್ಳಿಗೆ ಬಂದು ಊರಿನವರನ್ನು ವಿಚಾರಣೆ ಮಾಡಿ ಮಹಜರ್ ಮಾಡಿರುವುದು

ನಿಜ. ಆದರೆ ನಾನು ಮತ್ತು ಅಂದಾನಪ್ಪ ಬಶೆಟ್ಟಿ ಗಂಡ-ಹೆಂಡತಿ ಅಲ್ಲವೆಂದು ವರದಿ ಮಾಡಿದ್ದಾರೆ ಎನ್ನುವುದು ಸುಳ್ಳು. ನಾನು ಅಂದಾನಪ್ಪ ಬಶೆಟ್ಟಿಯ ಹೆಂಡತಿ ಎಂಬ ಬಗ್ಗೆ ಬಾಯಿ ಮಾತಿನ ಹೇಳಿಕೆ ಕೊಟ್ಟಿದ್ದೆ, ದಾಖಲೆಗಳನ್ನು ಕೊಟ್ಟಿರಲಿಲ್ಲ. ಗ್ರಾಮ ಲೆಕ್ಕಿಗರು ನಮ್ಮ ಊರಿಗೆ ಬಂದು ಗ್ರಾಮಸ್ಥರನ್ನು ಮತ್ತು ನನ್ನನ್ನು ವಿಚಾರಣೆ ಮಾಡಿ ದಾಖಲೆಗಳನ್ನು ಪರಿಶೀಲಿಸಿ ನಾನು ಮತ್ತು ಅಂದಾನಪ್ಪ ಬಶೆಟ್ಟಿ ಗಂಡ-ಹೆಂಡತಿ ಅಲ್ಲದಿದ್ದರೂ ನಾನು ಸುಳ್ಳು ಮಾಹಿತಿ ಕೊಟ್ಟು ವಂಶವೃಕ್ಷ ಪಡೆದಿದ್ದೇನೆಂದು ಮೇಲಿನ ಅಧಿಕಾರಿಗಳಿಗೆ ವರದಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಕುಟುಂಬ ಸದಸ್ಯರು ಗ್ರಾಮ ಲೆಕ್ಕಿಗರು ಮಾಡಿದ ಮಹಜರ್ ಮೇಲೆ ಸಹಿ ಮಾಡುವುದಿಲ್ಲವೆಂದು ಹೇಳಿದ್ದೆವು ಎಂದರೆ ನನಗೆ ನೆನಪಿಲ್ಲ. ಇಟಗಿ ತಹಶೀಲ್ದಾರರು ನಾನು ವಂಶವೃಕ್ಷವನ್ನು ಹೂವಿನಹಡಗಲಿ ತಾಲ್ಲೂಕು ಕಚೇರಿಯಲ್ಲೇ ಪಡೆದುಕೊಳ್ಳಬೇಕು ಎಂದು ಆದೇಶ ಮಾಡಿದರು ಎಂದರೆ ಮೊದಲು ನಾನು ಹೂವಿನಹಡಗಲಿಯಲ್ಲಿ ವಂಶವೃಕ್ಷ ದೃಢೀಕರಣ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ರಿಜೆಕ್ಟ್ ಮಾಡಿದ್ದರು. ನಾನು ಸೂಕ್ತ ದಾಖಲೆಗಳನ್ನು ಒದಗಿಸದೇ ಇದ್ದಿದ್ದರಿಂದ ಹೂವಿನಹಡಗಲಿ ತಹಶೀಲ್ದಾರ ನಾನು ಕೋರಿದ ವಂಶವೃಕ್ಷದ ಅರ್ಜಿಯನ್ನು ತಿರಸ್ಕರಿಸಿದ್ದರು ಎಂದರೆ ನಾನು ಅರ್ಜಿ ಸಲ್ಲಿಸಿದಾಗ ನನ್ನ ಆಧಾರ್ ನಂದಿಹಳ್ಳಿಯಲ್ಲಿದೆ, ಅಲ್ಲಿಗೆ ಹೋಗಿ ಅರ್ಜಿ ಹಾಕು ಎಂದು ಹೇಳಿ ನನ್ನ ಅರ್ಜಿಯನ್ನು ರಿಜೆಕ್ಟ್ ಮಾಡಿದರು. ನಾವು ಗಂಡ-ಹೆಂಡತಿ ಹಡಗಲಿಯಲ್ಲಿ ವಾಸ ಮಾಡುತ್ತಿದ್ದೇವೆ, ನಮ್ಮ ದಾಖಲೆಗಳು ಹಡಗಲಿ ವಿಳಾಸದಲ್ಲೇ ಇರುತ್ತವೆ ಎಂದು ನಾನು ಅವರಿಗೆ ಹೇಳಲಿಲ್ಲವೇ? ಎಂದರೆ ಹೇಳಲಿಲ್ಲ, ಏಕೆಂದರೆ ನನ್ನ ಗಂಡನ ಮನೆಯವರು ಬಿಡಲಿಲ್ಲ. ನನ್ನ ಗಂಡ ಆತ ಮೃತಪಡುವವರೆಗೆ ಹಡಗಲಿ ವಿಳಾಸ ಬಿಟ್ಟು ಬೇರೆ ಯಾವುದೇ ವಿಳಾಸಕ್ಕೆ ಬದಲಾವಣೆ ಮಾಡಿಕೊಂಡಿರಲಿಲ್ಲ ಎಂದರೆ ಸರಿ. ನಿಪಿ12ರಲ್ಲಿ ನಮೂದಾಗಿರುವ ವಿಳಾಸವೇ ಅಂದಾನಪ್ಪ ಬಶೆಟ್ಟಿಯ ಮೂಲ ವಿಳಾಸ ಎಂದರೆ ಸರಿ.

***(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
**ಹೂವಿನ ಹಡಗಲಿ.**